ಕರ್ನಾಟಕ ಸರ್ಕಾರ

# ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳ ಆಯುಕ್ತಾಲಯ,

## ಆನಂದರಾವ್ ವೃತ್ತ, ಬೆಂಗಳೂರು-09.

ಸಂಖ್ಯೆ:ಮುಲೆಪಅ(ಆ)ಆಡಿ/ಹೊರಗುತ್ತಿಗೆ/68/2018-19 ದಿ: /02/2018 02/03/2019

## ಸುತ್ತೋಲೆ

ವಿಷಯ: ರಾಜ್ಯ ವಲಯದ ಸರ್ಕಾರಿ ಆಸ್ಪತ್ರೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯನಿರ್ವಹಿಸಿತ್ತಿರುವ ನಾನ್-ಕ್ಲಿನಿಕಲ್ ಮತ್ತು ಗ್ರೂಪ್-ಡಿ ನೌಕರರ ವೇತನ/ಪಿ.ಎಫ್./ಇ.ಎಸ್.ಐ.ಗಳನ್ನು ಸರಿಯಾಗಿ ಪಾವತಿಸುವ ಬಗ್ಗೆ.

*************************

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಜ್ಯ ವಲಯದ ಜಿಲ್ಲಾ ಆಸ್ಪತ್ರೆಗಳು ಮತ್ತು ತಾಲ್ಲೂಕು ಮಟ್ಟದ ಆಸ್ಪತ್ರೆಗಳಲ್ಲಿ ಹೊರಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ನಾನ್-ಕ್ಲಿನಿಕಲ್ ಮತ್ತು ಗ್ರೂಪ್-ಡಿ ನೌಕರರ ಬಿಲ್ಲುಗಳು ಮೇಲು ಸಹಿಗಾಗಿ ಬರುತ್ತಿದ್ದು, ಇದರಲ್ಲಿ ಹಲವಾರು ಸರ್ಕಾರಿ ಆಸ್ಪತ್ರೆಯ ಬಿಲ್ಲುಗಳಲ್ಲಿ ಪಿ.ಎಫ್. ಮತ್ತು ಇ.ಎಸ್.ಐ. ಕಟಾವು ಮಾಡಿರುವ ದಾಖಲೆಗಳ ಪ್ರತಿ ಲಗತ್ತಿಸದೆ, ಮೇಲು ಸಹಿಗಾಗಿ ಬರುತ್ತಿರುವುದು ಗಮನಕ್ಕೆ ಬಂದಿರುತ್ತದೆ ಹಾಗು ವೇತನ/ಪಿ.ಎಫ್./ಇ.ಎಸ್.ಐ.ಗಳನ್ನು ನಿಯಮಿತ ಸಮಯದಲ್ಲಿ ಪಾವತಿಸದೆ ಸಫಾಯಿ ಕರ್ಮಚಾರಿ ಆಯೋಗದಲ್ಲಿ, ಶಾಸನ ಸಭೆಯ ಉಪ ಸಮಿತಿಗಳಲ್ಲಿ ಹಾಗು ನ್ಯಾಯಾಲಯಗಳಲ್ಲೂ ಪ್ರಕರಣಗಳು ದಾಖಲಾಗುತ್ತಿರುವುದು ಗಮನಕ್ಕೆ ಬಂದಿದ್ದು, ಇದು ಗಂಭೀರ ವಿಚಾರವಾಗಿರುತ್ತದೆ.

ಆದ್ದರಿಂದ, ಇನ್ನು ಮುಂದೆ, ಹೊರಗುತ್ತಿಗೆಯ ನಾನ್-ಕ್ಲಿನಿಕಲ್ ಮತ್ತು ಗ್ರೂಪ್-ಡಿ ನೌಕರರ ವೇತಸದ ಬಿಲ್ಲುಗಳನ್ನು ಮೇಲುಸಹಿಗಾಗಿ ಸಲ್ಲಿಸುವಾಗ ಹಿಂದಿನ ತಿಂಗಳ ಪಿ.ಎಫ್./ಇ.ಎಸ್.ಐ.ಗಳನ್ನು ಪಾವತಿಸಿದ ದಾಖಲೆಗಳ ಪ್ರತಿಯನ್ನು ಗುತ್ತಿಗೆದಾರರಿಂದ ಪಡೆದು, ಪರಿಶೀಲಿಸಿ, ದೃಢೀಕರಿಸಿ ಕಡ್ಡಾಯವಾಗಿ ಸಲ್ಲಿಸುವುದು, ಬಟವಾಡೆ(ಡಿ.ಡಿ.ಓ.) ಅಧಿಕಾರಿಗಳ ಆಧ್ಯ ಕರ್ತವ್ಯವಾಗಿರುತ್ತದೆ. ಸದರಿ ದಾಖಲೆಗಳನ್ನು ಸಲ್ಲಿಸದೇ ಇದ್ದ ಪಕ್ಷದಲ್ಲಿ ಇದಕ್ಕೆ ನೀವೆ ನೇರ ಜವಾಬ್ದಾರರಾಗುತ್ತೀರೆಂದು ಎಚ್ಚರಿಸಲಾಗುತ್ತಿದೆ.

**ಗುತ್ತಿಗೆದಾರರು ಕಾಲಕಾಲಕ್ಕೆ ನಿಯಮಾನುಸಾರ ಹೊರಗುತ್ತಿಗೆ ನೌಕರರಿಗೆ ವೇತನ/ಪಿ.ಎಫ್./ಇ.ಎಸ್.ಐ.ಗಳನ್ನು ಪಾವತಿಸದೇ ಇದ್ದ ಪಕ್ಷದಲ್ಲಿ, ಸಂಬಂಧಿಸಿದ ಆಸ್ಪತ್ರೆಯ ಮುಖ್ಯಸ್ಥರು ಟೆಂಡರ್ ಕರೆಯುವ ಪ್ರಾಧಿಕಾರವಾದ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳಿಗೆ ಮಾಹಿತಿಯನ್ನು ಸಲ್ಲಿಸಿ, ಸೂಕ್ತಕ್ರಮ ಕೈಗೊಳ್ಳಲು ಶಿಫಾರಸ್ಸು ಮಾಡಲು ಈ ಮೂಲಕ ಸೂಚಿಸಿದೆ.**

ಆಯುಕ್ತರು, 1.3.19

ಆರೋಗ್ಯ ಮತ್ತು ಕು. ಕ. ಸೇವೆಗಳ ಆಯುಕ್ತಾಲಯ,

ಆನಂದರಾವ್ ವೃತ್ತ, ಬೆಂಗಳೂರು-09.

ಪ್ರತಿಯನ್ನು:

1. ಆಸ್ಪತ್ರೆಯ ಅಧೀಕ್ಷಕರು/ ಜಿಲ್ಲಾ ಶಸ್ತ್ರ ಚಿಕಿತ್ಸಕರು/ ಜಿಲ್ಲಾ ಆರೋಗ್ಯ ಮತ್ತು ಕು. ಕ. ಅಧಿಕಾರಿಗಳು/ ಆಡಳಿತ ವೈದ್ಯಾಧಿಕಾರಿಗಳು……
   ಇವರ ಮಾಹಿತಿಗಾಗಿ ಹಾಗು ಸೂಕ್ತ ಕ್ರಮ ಕೈಗೊಳ್ಳಲು ಸೂಚಿಸಿದೆ.
2. ಹಿರಿಯ ಕಾರ್ಯಕ್ರಮಾಧಿಕಾರಿಗಳು, ಗಣಕಯಂತ್ರ ವಿಭಾಗ, ಆಕುಕ ಸೇವೆಗಳು, ಬೆಂಗಳೂರು-09. ಇವರಿಗೆ ಇಲಾಖೆಯ ಅಂತರ್ಜಾಲದಲ್ಲಿ ಪ್ರಕಟಿಸಲು ಸೂಚಿಸಿದೆ.
3. ಕಛೇರಿ ಪ್ರತಿ.